**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 08-04-2026:**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

10.ದಿನಾಂಕ 1-2-14ರಂದು ಎಸ್ ಬಿ ಐ ರವರು ನಿಪಿ-77ರೊಂದಿಗೆ ನೀಡಿದ ಆರೋಪಿತರಿಗೆ ಸಂಬಂಧಿಸಿದ ಬ್ಯಾಂಕ್ ಸ್ಟೇಟ್ಮೆಂಟನ್ನು ಸ್ವೀಕರಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-77(1) ಎಂದು ಗುರುತಿಸಲಾಯಿತು.

11.ದಿನಾಂಕ 8-7-14ರಂದು ಎಸ್ ಬಿ ಎಂ ವ್ಯವಸ್ಥಾಪಕರು ಆರೋಪಿಗೆ ಸಂಬಂಧಪಟ್ಟಂತೆ ನೀಡಿದ ಬ್ಯಾಂಕ್ ಸ್ಟೇಟ್ಮೆಂಟನ್ನು ನಿಪಿ-81ರಂತೆ ಪತ್ರಬರೆದು ನಿಪಿ-76ರಂತೆ ನಿಪಿ-82ರ ಪತ್ರದೊಂದಿಗೆ ನೀಡಿದ್ದನ್ನು ಸ್ವೀಕರಿಸಿರುತ್ತೇನೆ.

12.ದಿನಾಂಕ 8-7-14 ರಂದು ಎಸ್ ಬಿ ಎಂ ವ್ಯವಸ್ಥಾಪಕರು ಆರೋಪಿತರ ಹೆಂಡತಿ ಪದ್ಮಾವತಿಗೆ ಸಂಬಂಧಪಟ್ಟಂತೆ ನೀಡಿದ ಬ್ಯಾಂಕ್ ಸ್ಟೇಟ್ಮೆಂಟನ್ನು ನಿಪಿ-83ರಂತೆ ಪತ್ರ ಬರೆದು ಅವರು ಕಳುಹಿಸಿದ ಸ್ಟೇಟ್ಮೆಂತನ್ನು ನಿಪಿ-84ರ ಪತ್ರದೊಂದಿಗೆ ಸ್ವೀಕರಿಸಿರುತ್ತೇನೆ. ಆ ಸ್ಟೇಟ್ಮೆಂಟನ್ನು ನೋಡುತ್ತಿದ್ದು **ನಿಪಿ-176** ಎಂದು ಗುರುತಿಸಲಾಯಿತು.

13.ದಿನಾಂಕ 6-1-14 ರಂದು ಹಾಸನದ ಕಾರ್ಪೊರೇಷನ್ ಬ್ಯಾಂಕ್ ನ ವ್ಯವಸ್ಥಾಪಕರಿಗೆ ಪತ್ರ ಬರೆದು ಆರೋಪಿತರ ಮಗಳಾದ ರಂಜಿತಾರವರ ಹೆಸರಿನಲ್ಲಿರುವ ಬ್ಯಾಂಕ್ ಖಾತಾ ಮಾಹಿತಿ ನೀಡುವಂತೆ ಕೋರಿರುತ್ತೇನೆ. ಅದಕ್ಕೆ ಅವರು ದಿಃ8-1-14 ರಂದು ನಿಪಿ-90ರ ಪತ್ರದೊಂದಿಗೆ ನಿಪಿ-91ರಂತೆ ಮಾಹಿತಿ ನೀಡಿದ್ದನ್ನು ಸ್ವೀಕರಿಸಿರುತ್ತೇನೆ.

14.ದಿನಾಂಕ 6-1-14 ರಂದು ಹಾಸನದ ಸಾಲಗಾಮೆ ರಸ್ತೆಯ ಕಾರ್ಪೊರೇಷನ್ ಬ್ಯಾಂಕ್ ನ ವ್ಯವಸ್ಥಾಪಕರಿಗೆ ನಿಪಿ-79ರಂತೆ ಪತ್ರ ಬರೆದು ಆರೋಪಿತರ ಮಗಳಾದ ವನಿತಾರವರ ಹೆಸರಿನಲ್ಲಿರುವ

ಬ್ಯಾಂಕ್ ಖಾತಾ ಸ್ಟೇಟ್ಮೆಂಟನ್ನು ನೀಡುವಂತೆ ಕೋರಿರುತ್ತೇನೆ. ಅದಕ್ಕೆ ಅವರು ದಿಃ7-1-14 ರಂದು ನಿಪಿ-80ರ ಪತ್ರದೊಂದಿಗೆ ಮಾಹಿತಿ ನೀಡಿದ್ದನ್ನು ಸ್ವೀಕರಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು **ನಿಪಿ-177** ಎಂದು ಗುರುತಿಸಲಾಯಿತು.

15.ದಿಃ7-6-14 ರಂದು ಹಾಸನದ ಹೆಡ್ ಪೋಸ್ಟ್ ಮಾಸ್ಟರ್ ಗೆ **ನಿಪಿ-178**ರಂತೆ ಪತ್ರ ಬರೆದು ಅವರ ಹೆಸರಿನಲ್ಲಿರುವ 8 ಎನ್ ಎಸ್ ಸಿ ಗಳ ಮಾಹಿತಿ ನೀಡುವಂತೆ ಕೇಳಿಕೊಂಡಿದ್ದೆನು. ಅದರಂತೆ ಅವರು ದಿಃ13-6-14 ರಂದು ನಿಪಿ-98 ಮತ್ತು 99 ರಂತೆ ಮಾಹಿತಿ ನೀಡಿದ್ದನ್ನು ಸ್ವೀಕರಿಸಿರುತ್ತೇನೆ.

16.ದಿನಾಂಕ 7-6-14 ರಂದು ಎಲ್ ಐ ಸಿ ವ್ಯವಸ್ಥಾಪಕರಿಗೆ **ನಿಪಿ-179** ರಂತೆ ಪತ್ರ ಬರೆದು ಆರೋಪಿತರ ಹೆಸರಿನಲ್ಲಿದ್ದ 4 ಪಾಲಿಸಿಗಳ ಮಾಹಿತಿ ನೀಡುವಂತೆ ಕೇಳಿಕೊಂಡಿರುತ್ತೇನೆ. ಅಲ್ಲದೆ ಪೊಲೀಸ್ ಉಪಾಧೀಕ್ಷಕರಾದ ಶೇಕ್ ಹುಸೇನ್ ರವರು ದಿಃ19-11-13 ರಂದು 3 ಪತ್ರಗಳನ್ನು **ನಿಪಿ-180 ರಿಂದ ನಿಪಿ-182** ರಂತೆ ಬರೆದು ಮಾಹಿತಿ ಕೇಳಿದ್ದರು. ತನಿಖಾ ಕಾಲದಲ್ಲಿ ನಾನು ನಿಪಿ-96 ಮತ್ತು 97ರ ಮಾಹಿತಿ ಸ್ವೀರಿಸಿರುತ್ತೇನೆ. ಡಿವೈ ಎಸ್ ಪಿ ರವರು ನಿಪಿ-93 ರಿಂದ 95 ರ ಮಾಹಿತಿ ಸ್ವೀಕರಿಸಿರುತ್ತಾರೆ.

17.ದಿನಾಂಕ 27-11-13 ರಂದು ಬಜಾಜ್ ಅಲಿಯಾನ್ಸ್ ಇನ್ಸುರೆನ್ಸ್ ರವರಿಗೆ ಪೊಲೀಸ್ ಉಪಾಧೀಕ್ಷಕರು ಆರೋಪಿತರ ಹೆಸರಿನಲ್ಲಿರುವ ವಿಮಾ ಪಾಲಿಸಿ ವಿವರ ನೀಡುವಂತೆ ಪತ್ರ ಬರೆದು ಕೇಳಿಕೊಂಡಿರುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನಿಪಿ-110 ಮತ್ತು 111ರಂತೆ ನಾನು ಸ್ವೀಕರಿಸಿರುತ್ತೇನೆ.

18.ಹಾಸನ ಜೀವವಿಮಾ ಅಧಿಕಾರಿಗಳಿಗೆ 6-6-14 ರಂದು ಪತ್ರ ಬರೆದು ಆರೋಪಿತರು ಹೊಂದಿರುವ 5 ಕೆಜಿಐಡಿ ಪಾಲಿಸಿಗಳ ಮಾಹಿತಿ ನೀಡುವಂತೆ ಕೋರಿ ನಿಪಿ-100ರಂತೆ ಪತ್ರ ಬರೆದಿದ್ದು

ಅದಕ್ಕೆ ಅವರು ನಿಪಿ-101, 101(1) ರಿಂದ 101(20)ರಂತೆ ಮಾಹಿತಿ ನೀಡಿದ್ದನ್ನು ಸ್ವೀಕರಿಸಿರುತ್ತೇನೆ.

19.ಹಾಸನದ ವಿಜಯಾ ಬ್ಯಾಂಕ್ ನ ಮುಖ್ಯ ಶಾಖೆಗೆ 7-6-14 ರಂದು ಪತ್ರ ಬರೆದು ಆರೋಪಿತರ ಹೆಂಡತಿ ಪದ್ಮಾವತಿಯವರ ಹೆಸರಿನಲ್ಲಿದ್ದ ನಿಶ್ಚಿತ ಠೇವಣಿ ಮಾಹಿತಿ ಕೋರಿ ನಿಪಿ-102 ರಂತೆ ಪತ್ರ ಬರೆದಿದ್ದೆನು. ಅದಕ್ಕೆ ಅವರು ನಿಪಿ-103 ರಂತೆ ನೀಡಿದ ಮಾಹಿತಿಯನ್ನು ಸ್ವೀಕರಿಸಿರುತ್ತೇನೆ.

20.ಹಾಸನದ ಆ್ಯಕ್ಸಿಸ್ ಬ್ಯಾಂಕ್ ನ ವ್ಯವಸ್ಥಾಪಕರಿಗೆ 7-6-14 ರಂದು ಪತ್ರ ಬರೆದು ಆರೋಪಿತರ ಹೆಂಡತಿ ಪದ್ಮಾವತಿಯವರ ಹೆಸರಿನಲ್ಲಿದ್ದ ನಿಶ್ಚಿತ ಠೇವಣಿ ಮಾಹಿತಿ ಕೋರಿ ನಿಪಿ-104 ರಂತೆ ಪತ್ರ ಬರೆದಿದ್ದೆನು. ಅದಕ್ಕೆ ಅವರು ನಿಪಿ-105 ರಂತೆ ನೀಡಿದ ಮಾಹಿತಿಯನ್ನು ಸ್ವೀಕರಿಸಿರುತ್ತೇನೆ.

21.ದಿನಾಂಕ 8-7-14 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಸನ ಇವರಿಗೆ ನಿಪಿ-112 ರಂತೆ ಪತ್ರ ಬರೆದು ಆರೋಪಿತರು ಹೊಂದಿರುವ ದ್ವಿಚಕ್ರ ವಾಹನ ಕೆಎ-20-ಎಲ್ -3612 ರ ಮಾಹಿತಿ ನೀಡುವಂತೆ ಕೋರಿರುತ್ತೇನೆ. ಅದಕ್ಕೆ ಅವರು ನಿಪಿ-113 ಮತ್ತು 114ರ ಮಾಹಿತಿ ನೀಡಿರುತ್ತಾರೆ.

22.ದಿಃ24-2-14 ರಂದು ಕೆಎ-13-ಎಂ-2780ರ ವಾಹನಕ್ಕೆ ಸಂಬಂಧಿಸಿದಂತೆ ನಿಪಿ-115 ಮತ್ತು 116ರ ವರದಿಯನ್ನು ಸ್ವೀಕರಿಸಿರುತ್ತೇನೆ.

23.ದಿನಾಂಕ 17-2-14 ರಂದು ಕೆಎ-13-ಎಂ 2780 ಮತ್ತು ಕೆಎ-20-ಎಲ್-3612 ರ ವಾಹನಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು **ನಿಪಿ-183ರ** ಪತ್ರದೊಂದಿಗೆ **ನಿಪಿ-184ರ** ಮಾಹಿತಿ ಮತ್ತು **ನಿಪಿ-185ರ** ಬಿ ಎಕ್ಸ್ಟ್ರಾಕ್ಟ್ ನೀಡಿರುತ್ತಾರೆ.

24.ದಿನಾಂಕ 24-2-14 ರಂದು ಆರ್ ಟಿ ಒ ರವರು ಮೇಲೆ ಹೇಳಿದ ಎರಡೂ ದ್ವಿಚಕ್ರವಾಹನಗಳಿಗೆ ಸಂಬಂಧಿಸಿದಂತೆ **ನಿಪಿ-186**ರ ಪತ್ರದ ಮೂಲಕ ನಿಪಿ-113 ಮತ್ತು 115 ರ ಮಾಹಿತಿ ನೀಡಿರುತ್ತಾರೆ.

(ಮುಂದುವರದ ಮುಖ್ಯವಿಚಾರಣೆಯನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**